ಸಾಕ್ಷಿಯನ್ನು ದಿಃ **11.07.2023** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ಎಸ್ ವಕೀಲ**ರಿಂದ**

ನಾನು ಹಾಲಿ ನನ್ನ ಕರ್ತವ್ಯದಿಂದ ನಿವೃತ್ತಿ ಹೊಂದಿದ್ದೇನೆ, ದಿಃ 30.06.2023 ರಂದು ನನಗೆ ನಿವೃತ್ತಿಯಾಗಿದೆ. ನನ್ನ ಹಿಂದಿನ ವಿಚಾರಣೆಯಲ್ಲಿ ನಾನು ನನ್ನ ಕರ್ತವ್ಯಕ್ಕೆ ಮೊಟ್ಟ ಮೊದಲು ಹಾಜರಾದ ಬಗ್ಗೆ ದಾಖಲೆ ಹಾಜರು ಪಡಿಸಬಲ್ಲೆ ಎಂದು ನುಡಿದಿದ್ದು, ಸದರಿ ದಾಖಲೆ ಇಂದು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ನನ್ನ ಬಳಿ ಇದ್ದರೆ ತಂದು ಹಾಜರು ಪಡಿಸುತ್ತೇನೆ ಎನ್ನುತ್ತಾರೆ. ನನ್ನ ಇಲಾಖಾ ವತಿಯಿಂದ ಸದರಿ ದಾಖಲೆಯನ್ನು ತಂದು ಹಾಜರು ಪಡಿಸಲು ಸಾಧ್ಯವಿಲ್ಲ. ನನ್ನ ಇಲಾಖೆಗೆ ಅರ್ಜಿ ಕೊಟ್ಟು ಸದರಿ ದಾಖಲೆಯನ್ನು ನಾನು ತಂದು ಹಾಜರು ಪಡಿಸಬಹುದು ಎಂದರೆ ನನಗೆ ಗೊತ್ತಿಲ್ಲ. ನಾನು ಬಿ.ಎಸ್.ಸಿ ಅಭ್ಯಾಸ ಮಾಡಿದ್ದೇನೆ. ನಾನು ವಿಧ್ಯಾವಂತನಾಗಿದ್ದು, ಎಲ್ಲಾ ವ್ಯವಹಾರದ ಜ್ಞಾನ ಇದೆ ಆದಾಗ್ಯೂ ದಾಖಲೆ ತಂದು ಹಾಜರು ಪಡಿಸುವುದು ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದ್ಯೆತ್ಯನಕೆರೆ ಕಾವಲಿನಲ್ಲಿ ನನ್ನ ತಂದೆ ಹೆಸರಿಗೆ ಇರುವ ಜಮೀನು ಭೂ-ಸ್ವಾಧೀನವಾಗಿದೆ ಎಂದು ಹೇಳಿದ್ದು, ಆ ಬಗ್ಗೆ ಸಂಬಂಧಪಟ್ಟ ಕಾಯ್ದೆ ಕಲಂ 4(1) ಕಲಂ 6 (1) ಅಡಿ ನೊಟೀಫಿಕೇಶನ್ ಆಗಿದೆ ಎಂದರೆ 1969 ರಲ್ಲೆ ಎರಡೂ ನೊಟೀಫಿಕೇಶನಗಳು ಆಗಿವೆ. ಸದರಿ ಭೂ-ಸ್ವಾಧೀನಕ್ಕೆ ಸಂಬಂಧಪಟ್ಟಂತೆ ಎಷ್ಟು ಹಣ ಅವಾರ್ಡ್ ಆಯಿತು ಎಂದು ಹೇಳಲು ನನಗೆ ಈಗ ನೆನಪಿಲ್ಲ. 1969 ರಲ್ಲಿ ಫೈನಲ್ ನೊಟೀಫಿಕೇಶನ್ ಆದ ನಂತರ 1970-71 ರ ಅವಧಿಯಲ್ಲಿ ನಾವು ಭೂ-ಸ್ವಾಧೀನದ ಪರಿಹಾರ ಪಡೆದುಕೊಂಡಿದ್ದೇವೆ ಎಂದರೆ ಸರಿ. ಆ ಕಾಲಕ್ಕೆ ಪರಿಹಾರವಾಗಿ ಎಕರೆಗೆ ರೂ. 2000/- ಗಳಂತೆ ಬಡ್ಡಿ ಸೇರಿಸಿ ಒಟ್ಟು ರೂ. 6000/- ಗಳಂತೆ ಹಣ ಪಾವತಿ ಮಾಡಿದ್ದರು. ಆ ಸಮಯದಲ್ಲಿ ಒಟ್ಟು 19 ಎಕರೆ, 19 ಗುಂಟೆ ಭೂ-ಸ್ವಾಧೀನ ಆಗಿತ್ತು. ವಾಸ್ತವದಲ್ಲಿ ಭೂ ಸ್ವಾಧೀನ ಆಗಿರುವುದು 9 ಎಕರೆ, 9 ಗುಂಟೆ

ನನ್ನ ಪ್ರತಿವಾದ ಪತ್ರದಲ್ಲಿಯೂ ಕೂಡ 9 ಎಕರೆ, 9 ಗುಂಟೆ ಭೂ-ಸ್ವಾಧೀನ ಆಗಿದೆ ಎಂದು ಹೇಳಿದ್ದೇನೆ ಆದಾಗ್ಯೂ 19 ಎಕರೆ 19 ಗುಂಟೆ ಭೂ ಸ್ವಾಧೀನ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾಖಲೆಗಳ ಪ್ರಕಾರ 1 ಎಕರೆಗೆ ರೂ. 1200/-, ಬಡ್ಡಿ ರೂ. 1500/- ಒಟ್ಟು 1 ಎಕರೆಗೆ 2700/- ರೂ. ಗಳಂತೆ ನಮ್ಮ ತಂದೆಗೆ ಪರಿಹಾರದ ಹಣ ಪಾವತಿಯಾಗಿತ್ತು ಎಂದರೆ ಅದರ ವಿಚಾರ ನನಗೆ ಗೊತ್ತಿಲ್ಲ ದಾಖಲೆ ಪರಿಶೀಲಿಸಿ ಹೇಳಬೇಕು. ಈ ರೀತಿ ನಮ್ಮ ತಂದೆ ಪರಿಹಾರವಾಗಿ ಪಡೆದುಕೊಂಡ ಹಣವನ್ನು ನಮ್ಮ ಮನೆಯ ಖರ್ಚು ವೆಚ್ಚ ಮತ್ತು ನಮ್ಮಗಳ ಮದುವೆ ಖರ್ಚು ವೆಚ್ಚಗಳನ್ನು ನಮ್ಮ ತಂದೆ ನಿಭಾಯಿಸಿದ್ದರು ಎಂದರೆ ಸರಿಯಲ್ಲ, ಜಮೀನು ತೆಗೆದುಕೊಂಡಿದ್ದರು. ಈ ರೀತಿ ನಮ್ಮ ತಂದೆ ಸದರಿ ಪರಿಹಾರದ ಹಣದಿಂದ ಜಮೀನು ಖರೀದಿ ಮಾಡಿದ್ದರು ಎಂಬ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಆದರೆ ಹಾಜರು ಪಡಿಸಲು ತೊಂದರೆ ಇಲ್ಲ. ಈ ರೀತಿ ಸರ್ಕಾರದಿಂದ ಕೊಟ್ಟಿದ್ದ ಪರಿಹಾರ ಸಾಲುವುದಿಲ್ಲ ಎಂದು ನಮ್ಮ ತಂದೆ ಹೆಚ್ಚುವರಿ ಪರಿಹಾರ ಕೇಳಿ ಎಲ್.ಎ.ಸಿ 435/1998 ರಂತೆ ಅರ್ಜಿ ಹೂಡಿದ್ದರು ಎಂದರೆ ಸರಿ. ಹೆಚ್ಚುವರಿ ಪರಿಹಾರ ಕೇಳಿದ್ದ ಮೇಲ್ಕಂಡ ಅರ್ಜಿ ಇದೆ ಹುಣಸೂರು ನ್ಯಾಯಾಲಯದಲ್ಲಿ ವಜಾ ಆಯಿತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಜಾ ಆದೇಶದ ವಿರುದ್ಧ ನಮ್ಮ ತಂದೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಎಂ.ಎಫ್.ಎ ನಂ.1856/2007 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿ ನಮ್ಮ ತಂದೆ ಪರವಾಗಿ ಪುರಸ್ಕಾರಗೊಂಡು ಹೆಚ್ಚಿನ ಪರಿಹಾರ ಕೊಡಬೇಕೆಂದು ಆದೇಶವಾಯಿತು ಎಂದರೆ ಸರಿ. ಆ ಕಾರಣ ನಮ್ಮ ತಂದೆ ಜಾರಿ ಅರ್ಜಿ ಸಂಖ್ಯೆ 47/2010 ರಂತೆ ಅರ್ಜಿ ಹೂಡಿದ್ದರು ಎಂದರೆ ಸರಿ. ಸದರಿ ಜಾರಿ ಅರ್ಜಿಯಲ್ಲಿ ಚಾರಾಸ್ಥಿ ಜಪ್ತು ಆದೇಶ ಹೊರಡಿಸಿದ್ದ ಕಾರಣ ಸರ್ಕಾರದಿಂದ ನ್ಯಾಯಾಲಯಕ್ಕೆ 4 ಲಕ್ಷದ 10 ಸಾವಿರ ಹಣ ಜಮಾ ಮಾಡಲಾಯಿತು ಎಂದರೆ ಸರಿ. ಸದರಿ ಹಣವನ್ನು ನ್ಯಾಯಾಲಯಂದಿಂದ ಪಡೆದುಕೊಳ್ಳುವ ಪೂರ್ವದಲ್ಲಿಯೆ ನಮ್ಮ ತಂದೆ ಮರಣ ಹೊಂದಿದ್ದರು ಎಂದರೆ ಸರಿಯಲ್ಲ, ಹಣವನ್ನು ಅವರೆ ಪಡೆದುಕೊಂಡಿದ್ದರು. ಸದರಿ ಹಣವನ್ನು ನನ್ನ ತಂಗಿಯಾದ ವಾದಿ ನಾನು ಮತ್ತು 2 ನೇ ಪ್ರತಿವಾದಿ ನಮ್ಮ

ವಾರಸುದಾರರಾಗಿ ನ್ಯಾಯಾಲಯದ ಮುಂದೆ ಹಾಜರಾಗಿ ಪರಿಹಾರದ ಹಣವನ್ನು ಪಡೆದುಕೊಂಡಿದ್ದೇವು ಎಂದರೆ ಸರಿ ಎಂದು ಸಾಕ್ಷಿ ಹಣವನ್ನು ನಾವೆ ಪಡೆದುಕೊಂಡಿದ್ದೇವು ಎನ್ನುತ್ತಾರೆ.

ವಾದಿಯ ಮದುವೆ ಆದ ನಂತರ ನಮ್ಮ ತಂದೆ ಅವರ ಜೀವಿತಾವಧಿಯಲ್ಲಿ ತಮ್ಮ ಮಗಳು ತಮ್ಮ ಅಕ್ಕಪಕ್ಕದಲ್ಲೆ ಬಂದು ನೆಲೆಸಲಿ ಎಂದು ಆಕೆಯ ಹೆಸರಿನಲ್ಲಿ ಹಳೆಯ ಸರ್ವೆ ನಂ. 1/13, ಹಾಲಿ ಸರ್ವೆ ನಂ. 1 ರಲ್ಲಿ 4 ಎಕರೆ, 12 ಗುಂಟೆ ಜಮೀನನ್ನು ಚಂದ್ರಪ್ಪ, ಬಸವರಾಧ್ಯ ಹೆಚ್.ಎಂ. ಪುಟ್ಟಸ್ವಾಮಾರಾಧ್ಯ ಹೆಚ್. ಎಂ. ರವರಿಂದ ಕ್ರಯಕ್ಕೆ ಪಡೆದು ವಾದಿ ಹೆಸರಿಗೆ ನೊಂದಣಿ ಮಾಡಿಸಿಕೊಟ್ಟರು ಎಂದರೆ ಸುಳ್ಳು. ಅನ್ನರಾಯಪುರ ಗ್ರಾಮದ ಸರ್ವೆ ನಂ. 60/ಪಿ ರಲ್ಲಿ 4 ಎಕರೆ ಜಮೀನನ್ನು ನಮ್ಮ ತಂದೆ ಹೆಚ್. ಎಂ. ಬಸವರಾಧ್ಯ ರವರ ಹೆಂಡತಿ ಪುಟ್ಟಗೌರಮ್ಮ ರವರಿಂದ ಕ್ರಯಕ್ಕೆ ಪಡೆದು ವಾದಿ ಹೆಸರಿಗೆ ನೊಂದಣಿ ಮಾಡಿಸಿಕೊಟ್ಟರು ಎಂದರೆ ಸುಳ್ಳು. ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಈಗ ವಾದಿಯೊಂದಿಗೆ ಷಾಮಿಲಾಗಿ 2 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ಹೆಚ್. ಎಂ. ಬಸವರಾಧ್ಯ ಮತ್ತು ಪುಟ್ಟಗೌರಮ್ಮ ನವರ ಮಗಳು ಗಾಯತ್ರಿ ರವರು ಇದೆ ಅಸಲು ದಾವಾ ಸಂಖ್ಯೆ 55/2022 ಭಾಗಾಂಶ ಕೋರಿ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ದಾವಾದ ವಾದಿಯಾದ ಗೀತಾ ಕುಮಾರಿ ಪಕ್ಷಗಾರರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಭಾಗಾಂಶದ ದಾವೆಯಲ್ಲಿ ನಾನು ಮತ್ತು ವಾದಿ ಇಬ್ಬರೂ ಕೂಡ ನ್ಯಾಯಾಲಯಕ್ಕೆ ಹಾಜರಾಗಿದ್ದೇವು ಎಂದರೆ ಸುಳ್ಳು. ಸದರಿ ದಾವಾದಲ್ಲಿ ವಾದಿಯನ್ನು ನಾನೆ ಕರೆದುಕೊಂಡು ಬಂದು ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಕೂಡ ಈಗ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ, ಅನ್ನರಾಯಪುರದ ಸರ್ವೆ ನಂ. 60/ಪಿ 2 ಎಕರೆ, 18 ಗುಂಟೆ ಎಲ್.ಎನ್.ಡಿ (ಬಿ) 451/94-95 ಈ ಸ್ವತ್ತು ಸಾಗುವಳಿ ಮೂಲಕ ನನಗೆ ಮಂಜೂರಾಗಿತ್ತು ಎಂದರೆ ಸರಿ. ಯಾವುದೆ ಸರ್ಕಾರಿ ಜಮೀನು ಮಂಜೂರು ಮಾಡಬೇಕೆಂದರೆ

ಮಂಜೂರಾದಾಗ ಸರ್ಕಾರಿ ನೌಕರಿಯಲ್ಲಿ ಇರಬಾರದು ಆತ ಸಣ್ಣ ಇಡುವಳಿದಾರನಾಗಿರಬೇಕು ಎಂದರೆ ಅದು ನನಗೆ ಗೊತ್ತಿಲ್ಲ ಆದರೆ ನಾನು 1991 ನೇ ಇಸವಿಯಿಂದ ಹಿಂದಿನ 10 ವರ್ಷಗಳಲ್ಲಿ ಅನುಭದಾರನಾಗಿದ್ದು ಅದರ ಆಧಾರ ಮೇಲೆ ಜಮೀನು ಮಂಜೂರಾಗಿತ್ತು ಆ ಸಮಯದಲ್ಲಿ ನಾನು ನೌಕರಿಯಲ್ಲಿ ಇರಲಿಲ್ಲ ಎನ್ನುತ್ತಾರೆ. ನಾನು ನೌಕರಿ ಸೇರಿದ್ದು 1994-95 ನೇ ಸಾಲಿನಲ್ಲಿ ಸೇರಿದ್ದರು ಕೂಡ ನಾನು ಆ ಸಮಯದಲ್ಲಿ ನೌಕರಿಯಲ್ಲಿ ಸೇರಿಲ್ಲ ಎಂದು ಆಸ್ತಿಯನ್ನು ಲಪಟಾಯಿವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ನನಗೆ ನೆನಪಾಗುತ್ತಿಲ್ಲ 1994-95 ನಾನು ಟ್ರೈನಿ ಆಗಿದ್ದಿರಬಹುದು ಎನ್ನುತ್ತಾರೆ. ನನಗೆ ಸದರಿ ಜಮೀನು ಮಂಜೂರು ಆಗುವ ಪೂರ್ವದಲ್ಲಿ ನನ್ನ ತಂದೆ ಮತ್ತು ನನ್ನ ತಮ್ಮನಾದ 2 ನೇ ಪ್ರತಿವಾದಿ ಕಾಡು ಮೇಡು ಕಡೆದು ಅದನ್ನು ವ್ಯವಸಾಯ ಯೋಗ್ಯ ಜಮೀನಾಗಿ ಮಾಡಿದ್ದರು ಎಂದರೆ ಸುಳ್ಳು. ನಮ್ಮ ತಂದೆ ಊರಿನಲ್ಲಿ ವಾಸವಾಗಿದ್ದ ಮನೆಯನ್ನು ಬಿಟ್ಟು ಮೇಲೆ ಹೇಳಿದಂತಹ ಅನ್ನರಾಯಪುರ ಗ್ರಾಮದ ಸರ್ವೆ ನಂ. 60/ಪಿ ನಲ್ಲಿ 100X50 ಅಡಿಗಳಲ್ಲಿ ಮನೆ ನಿರ್ಮಿಸಿ ವಾಸವಾಗಿದ್ದರು ಎಂದರ ಸುಳ್ಳು, ನಾನೆ ಒಂದು ಚಿಕ್ಕ ಮನೆಯನ್ನು ನಿರ್ಮಿಸಿದ್ದೆ ಆನಂತರದಲ್ಲಿ ಅದನ್ನು ವಿಸ್ತಾರ ಮಾಡಿಕೊಳ್ಳುತ್ತಾ ಬಂದಿದ್ದೆ ಎನ್ನುತ್ತಾರೆ. ಸದರಿ ಸರ್ವೆ ನಂ. 60/ಪಿ ನಲ್ಲಿ ಇದ್ದ 2 ಎಕರೆ , 18 ಗುಂಟೆ ಜಮೀಲನನ್ನು ನಾನು ವಾದಿಗೆ ಹೇಳಿ ಈ ದಾವಾದಿಂದ ಕೈ ಬಿಡಿಸಿ ಪ್ರತಿವಾದಿ 2 ಮತ್ತು 3 ರವರಿಗೆ ಮೋಸ ಮಾಡಿದ್ದೇನೆ ಎಂದರೆ ಸುಳ್ಳು ಅದು ನನ್ನ ಸ್ವಯಾರ್ಜಿತವಾಗಿದೆ.

ನಾನು ತಾಲ್ಲೂಕು ಪಂಚಾಯಿತಿ ನ್ಯಾಯಾಲಯದಲ್ಲಿ ಚಲ್ಲಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ದಿ ಅಧಿಕಾರಿ ಮತ್ತು 2 ನೇ ಪ್ರತಿವಾದಿ ವಿರುದ್ಧ ಒಂದು ಪ್ರಕರಣ ಹೂಡಿದ್ದೆ ಎಂದರೆ ಸರಿ. ಸದರಿ ಪ್ರಕರಣದ ಮುಖ್ಯ ಅರ್ಜಿಯಲ್ಲಿ ಏನೇನು ಬರೆದು ಸಲ್ಲಿಸಿದ್ದೆ ಎಂದು ನನಗೆ ತಿಳಿದಿದೆ. ಈಗ ನನಗೆ ತೋರಿಸುತ್ತಿರುವ ದಾಖಲೆ ಅದೆ ಅರ್ಜಿಯಾಗಿದೆ ಎಂದರೆ ಸರಿ. ಸದರಿ ಅರ್ಜಿಯನ್ನು **ನಿಡಿ. 20** ಎಂದು ಗುರುತಿಸಲಾಯಿತು. 1970 ರಲ್ಲಿ ನನ್ನ ವಯಸ್ಸು 7 ವರ್ಷ ಆಗಿತ್ತು.ನಿಡಿ. 20 ರ ಅರ್ಜಿಯ 2 ಪುಟದ 3 ನೇ ಪ್ಯಾರಾದಲ್ಲಿ "ಸಾಗುವಳಿ ಮೂಲಕ ಮಂಜೂರಾದ ಸ್ವತ್ತಿನ ಖಾತೆ ಹಾಗೂ ಪಹಣಿ ನನ್ನ ಹೆಸರಿನಲ್ಲಿ

ಇದ್ದು, ಸದರಿ ಸ್ವತ್ತಿನ ಪೈಕಿ ದಿಃ 08.05.1995 ರಲ್ಲಿ ಮಂಜೂರಾಗಿದ್ದು, ಹಾಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆ. ಮೇಲ್ಕಂಡ ಸ್ವತ್ತಿನ ಪೈಕಿ ಪೂರ್ವ–ಪಶ್ಚಿಮವಾಗಿ 45 ಅಡಿ , ದಕ್ಷಿಣ–ಉತ್ತರ 100 ಅಡಿ ವಿಸ್ತೀರ್ಣವುಳ್ಳ ಮಂಗಳೂರು ಹೆಂಚಿನ ಮನೆ ಅರ್ಜಿದಾರರ ಮಾಲೀಕತ್ವಕ್ಕೆ ಒಳಪಟ್ಟು ಹಾಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆ. ಆ ಸಂಬಂಧ 1970 ರಲ್ಲಿ ಷಡ್ಯೂಲ್ ಸ್ವತ್ತಿನ ಮನೆಯನ್ನು ಸ್ವಾಧೀನಾನುಭವದಲ್ಲಿ ಇರುತ್ತಾರೆ" ಎಂದು ನಮೂದಿಸಿರುತ್ತಾರೆ ಎಂದರೆ ಆ ರೀತಿ ತಪ್ಪಾಗಿ ನಮೂದಾಗಿದೆ ಎನ್ನುತ್ತಾರೆ. ಸದರಿ ಆಸ್ತಿಯನ್ನು ತಲಟಾಯಿಸುವ ಉದ್ದೇಶದಿಂದ ನಮ್ಮ ತಂದೆಯ ಮನೆ ನಿರ್ಮಾಣ ಮಾಡಿದ್ದರು ಕೂಡ ನಾನು ಮಾಡಿದ್ದೇನೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸುತ್ತಿರುವ ಛಾಯಾ ಚಿತ್ರದಲ್ಲಿರುವ ಮನೆಯನ್ನು ಅನ್ನರಾಯಪುರದ ಸರ್ವೆ ನಂ. 60/ಪಿ ನಲ್ಲಿ ನನ್ನ ತಂದೆ ಕಟ್ಟಿದ್ದರು ಎಂದರೆ ಸರಿಯಲ್ಲ, ಸದರಿ ಮನೆಯನ್ನು ನಾನು ಕಟ್ಟಿದ್ದೆ ಎನ್ನುತ್ತಾರೆ. 2 ನೇ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಸದರಿ ಭಾವ ಚಿತ್ರವನ್ನು **ನಿಡಿ. 21** ಎಂದು ಗುರುತಿಸಲಾಯಿತು. ಈ ಮನೆಯು 3 ಪೋರ್ಶನ್ ಹೊಂದಿದೆ ಎಂದರೆ ಸರಿ ಎಂದು ನುಡಿದು ನನಗೆ 3 ಜನ ಹೆಣ್ಣು ಮಕ್ಕಳು ಇದ್ದರಿಂದ 3 ಪೋರ್ಶನ್ ಮಾಡಿದ್ದೇನೆ ಎಂದು ಸಾಕ್ಷಿ ಸ್ವಯಂ ನುಡಿಯುತ್ತಾರೆ. ಈಗ ನನಗೆ ತೋರಿಸುತ್ತಿರುವ ಭಾವ ಚಿತ್ರದಲ್ಲಿರುವ ಮನೆಯೂ ಎಡ ಭಾಗದಲ್ಲಿ ತಿಳಿನೀಲಿ ಬಣ್ಣದಿಂದ ಕೂಡಿರುವ ಮನೆ 1 ಪೋರ್ಶನ್ ಆಗಿದ್ದು, ನಿಳಿ ಹಸಿರು ಬಣ್ಣದಿಂದ ಕೂಡಿರುವ ಬಲ ಭಾಗದ ಮನೆ 2 ಪೋರ್ಶನ್ ಹೊಂದಿದೆ ಎಂದರೆ ಸಾಕ್ಷಿ ಒಟ್ಟಿಗೆ 3 ಪೋರ್ಶನ್ ಮಾಡಿದ್ದೇನೆ ಎನ್ನುತ್ತಾರೆ. ಸದರಿ ಛಾಯಾ ಚಿತ್ರವನು **ನಿಡಿ. 22** ಎಂದು ಗುರುತಿಸಲಾಯಿತು. ನಮ್ಮ ತಂದೆ ಅವರ ಜೀವಿತಾವಧಿಯಲ್ಲಿ ಅವರ ಇಬ್ಬರೂ ಗಂಡು ಮಕ್ಕಳು ಚೆನ್ನಾಗಿ ಇರಲಿ ಎಂದು ನೀಡಿ. 22 ರಲ್ಲಿ ಕಾಣುತ್ತಿರುವ ಮನೆಯ ಬಲ ಭಾಗದಿಂದ 1 ಪೋರ್ಶನ್ ಅನ್ನು 2 ನೆ ಪ್ರತಿವಾದಿಗೆ ಬಿಟ್ಟು ಕೊಟ್ಟು, ಮಧ್ಯದ ಪೋರ್ಶನ್ ಅನ್ನು ನಮ್ಮ ತಂದೆ ಉಳಿಸಿಕೊಂಡು, ಎಡ ಭಾಗದ 3 ನೇ ಪೋರ್ಶನ್ ಅನ್ನು ನನಗೆ ಬಿಟ್ಟು ಕೊಟ್ಟಿದ್ದರು ಎಂದರೆ ಸುಳ್ಳ 2 ನೇ ಪ್ರತಿವಾದಿ ತಾವಿದ್ದ ಮನೆಯನ್ನು ಉರಳಿಸಿ ಹೊಸ ಮನೆ ಕಟ್ಟಿಕೊಳ್ಳಬೇಕು ಎಂದು ನಾನಿದ್ದ ಮನೆಯಲ್ಲಿ ಇದ್ದರು ಎಂದು ಸಾಕ್ಷಿ ಸ್ವಯಂ ನುಡಿಯುತ್ತಾರೆ.

ನಿಡಿ. 22 ರ ಮೊದಲನೆ ಪೋರ್ಶನ್ ಮನೆಯನ್ನು ನಮ್ಮ ತಂದೆ 2 ನೇ ಪ್ರತಿವಾದಿಗೆ ಸ್ವಾಧೀನ ಕೊಟ್ಟ ಸಮಯದಿಂದಲೂ 2 ನೇ ಪ್ರತಿವಾದಿ ತನ್ನ ಹೆಂಡತಿ ಮಕ್ಕಳೊಂದಿಗೆ ವಾಸವಾಗಿದ್ದರೆ ಎಂದರೆ ನನಗೆ ಮಂಜೂರಾದ ಜಾಗವನ್ನು ನನ್ನ ತಂದೆ ಹೇಗೆ ಕೊಡುತ್ತಾರೆ ಎಂದು ಸಾಕ್ಷಿ ಸ್ವಯಂ ನುಡಿಯುತ್ತಾರೆ. ನಾನು ಸದರಿ ಮನೆಯನ್ನು ಹಾಗೂ ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ವಾದಿ ಹಾಗೂ ಆಕೆಯ ಗಂಡನೊಂದಿಗೆ ಷಾಮಿಲಾಗಿ 2 ನೇ ಪ್ರತಿವಾದಿಗೆ ಮಾನಸೀಕವಾಗಿ ಕಿರುಕುಳ ನೀಡುತ್ತಾ ಬಂದಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.